# ಆಹಾ ಸುದ್ದಿ!

★ ಸಸಿತೋಟ



ಜಪಾನಿನಲ್ಲಿ ಇತ್ತೀಚೆಗೆ ನಡೆದ ಬೋಡು ತಲೆಯ ಪುರುಷರ ಒಲಿಂಪಿಕ್ ಪಂದ್ಯದ ದೃಶ್ಯವಿದು. ಒಲಿಂಪಿಕ್‌ನಲ್ಲಿ ಬೋಡು ಮಂಡೆಯ ಮೂಲಕ ಹಗ್ಗ ಜಗ್ಗಾಟ ಸ್ಪರ್ಧೆ ನಡೆಯಿತಂತೆ. ಅಲ್ಲಿ ಬೋಡು ತಲೆ ಪುರುಷರ ಕ್ಲಬ್ ಕೂಡಾ ಇದೆಯಂತೆ. ಹೊಳೆಯುವ ತಲೆಯ ಮೂಲಕ ಇಡೀ ಜಗತ್ತನ್ನೇ ಬೆಳಗಲು ಹೊರಟಿದೆಯಂತೆ ಈ ಕ್ಲಬ್.



ಮನಿಲಾದಲ್ಲಿ ಈ ದೃಶ್ಯ ಮಾಮೂಲಂತೆ. ಕಟ್ಟಿಗೆಯಿಂದ ಮಾಡಿದ ಈ ‘ಪರಟ ಗಾಲಿ’ ಮೇಲೆ ಪ್ರಯಾಣಿಕರನ್ನು ಕೂರಿಸಿ ರೈಲ್ವೆ ಹಳಿಯ ಮೇಲೆ ತಳ್ಳುತ್ತ ಅವರನ್ನು ಬೇಕಾದ ಜಾಗಕ್ಕೆ ಮುಟ್ಟಿಸಿ ನಾಲ್ಕು ಕಾಸು ಸಂಪಾದಿಸುವುದು ಅಲ್ಲಿಯ ಬಡವರ ಕಾಯಕ. ರೈಲ್ವೆ ಹಾರ್ನ್ ಹೊಡೆದಾಗ ಕೆಳಗಿಳಿದು ನಿಂತುಕೊಂಡು ದಾರಿ ಬಿಟ್ಟರಾಯಿತು. ಅಪಘಾತವಾದರೆ ರೈಲ್ವೆ–ರೈಲ್ವೆ ಟ್ಯಾಕ್ಸಿ ಡಿಕ್ಕಿ ಎಂಬ ಶೀರ್ಷಿಕೆಯೂ ಮಾಮೂಲು.

ಸ್ವೀಡನ್ನಿನಲ್ಲಿ ಗಂಡ– ಹೆಂಡತಿಯರ ನಡುವಿನ ಸಂಬಂಧ ಸುಧಾರಿಸಲು, ದಂಪತಿ ಹೆಚ್ಚು ಸಮಯವನ್ನು ಒಟ್ಟಿಗೆ ಕಳೆಯುವಂತೆ ಮಾಡಲು ಕಚೇರಿ ಕೆಲಸದ ಮಧ್ಯೆ ಒಂದು ಗಂಟೆಯ ‘ಸೆಕ್ಸ್ ಬ್ರೇಕ್’ ನೀಡುವಂತೆ ಅಲ್ಲಿಯ ನಗರಾಡಳಿತದ ಸದಸ್ಯನೊಬ್ಬ ಸಲಹೆ ನೀಡಿದ್ದಾನಂತೆ. ಆದರೆ ಈ ಬ್ರೇಕ್‌ನಲ್ಲಿ ಉದ್ಯೋಗಿಗಳು ಹೆಂಡತಿಯೊಂದಿಗೇ ಸಮಯ ಕಳೆಯುತ್ತಾರೆಂದು ಹೇಗೆ ದೃಢಪಡಿಸುವುದು? ಹೆಂಡತಿ ಬದಲು ಸ್ನೇಹಿತೆ ಜೊತೆ ಹೋದರೆ.. ಹೀಗೆಲ್ಲ ಅನುಮಾನಗಳು ಎದ್ದು ಸಲಹೆ ಕಾನೂನಾಗಿ ಪಾಸ್ ಆಗಲಿಲ್ಲವಂತೆ.



ಎಸ್ತೋನಿಯಾದ ಉಪಾಹಾರಗೃಹದಲ್ಲಿ ಆರ್ಡರ್ ಮಾಡಿದ ತಿನಿಸನ್ನು ಈ ರೊಬಾಟ್ ಮನೆಗೆ ತಲುಪಿಸುವುದಂತೆ. ಓಡಾಡುವವರಿಗೆ ಡಿಕ್ಕಿ ಹೊಡೆಯದೆ, ರಸ್ತೆ ಸಂಚಾರ ದೀಪದ ಸಂಕೇತವನ್ನು ಪಾಲಿಸುತ್ತ ಆಹಾರದ ಪೊಟ್ಟಣವನ್ನು ಸುರಕ್ಷಿತವಾಗಿ ತಲುಪಿಸುತ್ತದಂತೆ. ತಲುಪಿಸುವುದು ತಡವಾದರೆ ಮಾತ್ರ ಬೈಗುಳಗಳನ್ನು ಸುರಿಸಲು ಉಪಾಹಾರಗೃಹದ ಯಜಮಾನನೇ ಬೇಕು.

ಮಾನಸಿ ಎಂಬಾಕೆ ತನ್ನ ಮದುವೆಯ ದಿನ ಮುದ್ದಿನ ನಾಯಿ ಸುಲ್ತಾನನನ್ನು ಸಿಂಗರಿಸಿ ಮದುವೆಯ ಎಲ್ಲಾ ಸಂಪ್ರದಾಯಗಳಲ್ಲೂ ಪಾಲ್ಗೊಳ್ಳುವಂತೆ ಮಾಡಿದ್ದಾಳಂತೆ. ಸುಲ್ತಾನ್ ಸಪ್ತಪದಿಯಲ್ಲೂ ಪಾಲ್ಗೊಂಡ ಈ ಚಿತ್ರ ಫೇಸ್‌ಬುಕ್‌ನಲ್ಲಿ ವೈರಲ್ ಆಗಿದೆ. ನಿಮ್ಮ ಮುದ್ದಿನ ಪ್ರಾಣಿ ನಿಮ್ಮ ನೋವಿನ ಹಾಗೂ ಸಂತಸದ ಕ್ಷಣಗಳಲ್ಲಿ ಜೊತೆ ಕೊಡುತ್ತದೆ. ಜೊತೆಗೆ ಮದುವೆಯಲ್ಲೂ ಯಾಕಾಗಬಾರದು?



ಜಪಾನಿನಲ್ಲಿ ಟಾಯ್ಲೆಟ್ ಬಳಕೆಗೆ ಆ್ಯಪ್ ಬಂದಿದೆಯಂತೆ. ಉದ್ಯೋಗಿ ಕಚೇರಿಯ ಸಮಯದಲ್ಲಿ ಎಷ್ಟು ಸಮಯ ಶೌಚಾಲಯದಲ್ಲಿ ಸಮಯ ಕಳೆಯುತ್ತಾನೆ ಎಂಬುದನ್ನು ಪತ್ತೆ ಹಚ್ಚಲು ಶೌಚಾಲಯಕ್ಕೆ ಸೆನ್ಸರ್ ಅಳವಡಿಸಿದ್ದಾರಂತೆ. ಶೌಚಾಲಯವನ್ನು ಶೌಚಕ್ಕೆ ಬದಲು ನಿದ್ರಿಸಲು ಅನುಕೂಲವಾಗುವಂತೆ ರೂಪಿಸಿದರೆ ಪಾಪ, ಉದ್ಯೋಗಿಗಳಾದರೂ ಏನು ಮಾಡಿಯಾರು?